**ತಃಖ್ತೆ ನಂ – 5**

**ದಿನಾಂಕ : 21–08–2016ರಂದು ಸೇರಿದ ಸಾಮಾನ್ಯ ಸಭೆಯಲ್ಲಿ ಸ್ವೀಕರಿಸಿದ ಉಪನಿಯಮದ ತಿದ್ದುಪಡಿ ನಕಲುಗಳು**

| ತಿದ್ದುಪಡಿಯಾದ ಉಪನಿಯಮ ನಂ | ತಿದ್ದುಪಡಿ ಸ್ವೀಕರಿಸಿದ ನಂತರ ಆಗುವ ಸದರಿ ಉಪನಿಯಮದ ಪೂರ್ಣ ವಿವರ |
|---|---|
| 3 | **ಸಹಕಾರಿಯ ಕಾರ್ಯಕ್ಷೇತ್ರದ ವ್ಯಾಪ್ತಿ**<br>ಸಹಕಾರಿಯ ಕಾರ್ಯಕ್ಷೇತ್ರದ ವ್ಯಾಪ್ತಿಯು ಶಿವಮೊಗ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಹಾಗೂ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯನ್ನು ವ್ಯಾಪಿಸಿರುತ್ತದೆ. |
| 72 | **ನಿವ್ವಳ ಲಾಭ ವಿಭಜನಾ ಕ್ರಮ :**<br>ಕಾಯ್ದೆಯ ಕಾಲಂ 10(2)21ರಲ್ಲಿ ನಮೂದಿಸಿರುವಂತೆ ಆಯಾ ವರ್ಷದಲ್ಲಿ ಸಹಕಾರಿ ಗಳಿಸಿದ ನಿವ್ವಳ ಲಾಭವನ್ನು ಸಾಮಾನ್ಯ ಸಭೆಯಲ್ಲಿ ಘೋಷಿಸತಕ್ಕದ್ದು ಮತ್ತು ಈ ಕೆಳಕಂಡಂತೆ ವಿಂಗಡನೆ ಮಾಡತಕ್ಕದ್ದು. ನಿವ್ವಳ ಲಾಭವನ್ನು ಈ ಕೆಳಗಿನಂತೆ ವಿಂಗಡನೆ ಮಾಡುವುದಕ್ಕೆ ಮುಂಚೆ, ಹಿಂದಿನ ವರ್ಷದ ಅಥವಾ ವರ್ಷಗಳಲ್ಲಿನ ಕ್ರೋಢೀಕೃತ ನಷ್ಟ ಇದ್ದಲ್ಲಿ ಈ ನಿವ್ವಳ ಲಾಭದಲ್ಲಿ ವಜಾ ಮಾಡಿ ಉಳಿದ ಲಾಭವನ್ನು ಮಾತ್ರ ವಿಭಜನೆ ಮಾಡತಕ್ಕದ್ದು.<br>1. ನಿವ್ವಳ ಲಾಭದ ಕನಿಷ್ಟ ಶೇಕಡ 25ರಷ್ಟನ್ನು ಮೀಸಲು ನಿಧಿ (ರಿಸರ್ವ್ ಫಂಡ್)ಗೆ ಸೇರಿಸತಕ್ಕದ್ದು.<br>2. ನಿವ್ವಳ ಲಾಭದಲ್ಲಿ ಶೇಕಡಾ 2ರಷ್ಟನ್ನು ಸಹಕಾರ ಶಿಕ್ಷಣ ನಿಧಿಗೆ ತೆಗೆದಿರಿಸತಕ್ಕದ್ದು ಮತ್ತು ಅದನ್ನು ಸಾಮಾನ್ಯ ಸಭೆಯು ನಡೆದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಕಳುಹಿಸತಕ್ಕದ್ದು.<br>3. ನಿವ್ವಳ ಲಾಭದಲ್ಲಿ ಅನಿರೀಕ್ಷಿತ ನಷ್ಟಗಳು ಅಥವಾ ಸಾದಿಲ್ವಾರು ವೆಚ್ಚಗಳನ್ನು ಭರಿಸಲು ಕಾರ್ಯಾಚರಣಾ ಮೀಸಲು ನಿಧಿಗೆ ಶೇ.20<br>4. ನಿವ್ವಳ ಲಾಭದಲ್ಲಿ ಸಾಮಾನ್ಯ ನಿಕಾಯವು ಅನುಮೋದಿಸಿರುವ ಉದ್ದೇಶಕ್ಕಾಗಿ ಸಾಮಾನ್ಯ ಕ್ಷೇಮ ನಿಧಿಗೆ ಶೇ.5<br>5. ನಿವ್ವಳ ಲಾಭದಲ್ಲಿ ನೌಕರರಿಗೆ ಸಂದಾಯ ಮಾಡಬೇಕಾದ ಎರಡು ತಿಂಗಳ ವೇತನವನ್ನು ಮೀರದ ಬೋನಸ್ಸು<br>6. ನಿವ್ವಳ ಲಾಭದಲ್ಲಿ ಸದಸ್ಯರಿಗೆ ಸಾಮಾನ್ಯ ನಿಕಾಯ ನಿರ್ಧರಿಸಿದ ಆದರೆ ಶೇಕಡಾ 25ಕ್ಕೆ ಮೀರದಂತೆ ಡಿವಿಡೆಂಡ್ ರೂಪದಲ್ಲಿ ಲಾಭಾಂಶ.<br>ಉಳಿದ ಲಾಭಾಂಶದಲ್ಲಿ ಈ ಕೆಳಗಿನ ನಿಧಿಗಳಿಗೆ ಸಾಮಾನ್ಯನಿಕಾಯ ನಿರ್ಧರಿಸುವ ಮಿತಿಗಳಲ್ಲಿ ಹಂಚಿಕೆ ಮಾಡಬಹುದಾಗಿದೆ.<br>7. ಶೇಕಡಾ 5ಕ್ಕೆ ಮೀರದ ಮೊಬಲಗನ್ನು ಸಿಬ್ಬಂದಿ ಕ್ಷೇಮನಿಧಿಗೆ<br>8. ಶೇಕಡಾ 5ಕ್ಕೆ ಮೀರದ ಮೊಬಲಗನ್ನು ಹೋಕುಬಾಕಿ ನಿಧಿಗೆ<br>9. ಶೇಕಡಾ 10ಕ್ಕೆ ಮೀರದ ಮೊಬಲಗನ್ನು ರಜತ ಮಹೋತ್ಸವ ನಿಧಿಗೆ (ಜ್ಯುಬಿಲಿ ಫಂಡ್‌ಗೆ)<br>10. ಶೇಕಡಾ 10ಕ್ಕೆ ಮೀರದ ಮೊಬಲಗನ್ನು ಕಟ್ಟಡ ನಿಧಿಗೆ<br>11. ಶೇಕಡಾ 5ಕ್ಕೆ ಮೀರದಂತೆ ಸರ್.ಎಂ.ವಿ. ಶಿಕ್ಷಣನಿಧಿಗೆ<br>12. ಮೇಲ್ಕಂಡ ಹಂಚಿಕೆಯ ನಂತರ ಉಳಿಯುವ ಯಾವುದೇ ಮೊಬಲಗನ್ನು ಸಹಕಾರಿಯ ರಿಸರ್ವ್‌ಫಂಡಿಗೆ(ಮೀಸಲು ನಿಧಿಗೆ) ಸೇರಿಸತಕ್ಕದ್ದು. |
| 81 | **ಇತರೆ ಸಹಕಾರ ಸಂಸ್ಥೆಗಳಲ್ಲಿ ಸದಸ್ಯತ್ವ**<br>ಸಹಕಾರಿಯು ಈ ಕೆಳಕಂಡ ಸಹಕಾರ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆಯಬಹುದು<br>1. ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿ. ಬೆಂಗಳೂರು<br>2. ಸೌಹಾರ್ದ ಕಾಯ್ದೆಯಡಿ ರಚನೆಗೊಂಡ ಒಕ್ಕೂಟ<br>3. ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಹಕಾರ ಸಂಘಗಳ ರಾಷ್ಟ್ರೀಯ ಮಹಾ ಮಂಡಳ ನಿ., ಹೊಸದಿಲ್ಲಿ<br>4. ಸಹಕಾರಿಯ ಕಾರ್ಯ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,<br>~~5. ಸಹಕಾರ ಶಿಕ್ಷಣಕ್ಕೆ ಅನುಕೂಲಕರವಾದ ಉದ್ದೇಶವುಳ್ಳ / ಸಹಕಾರಿಯ ವ್ಯವಹಾರಕ್ಕೆ ಅನುಕೂಲ ಹಾಗೂ ಅಗತ್ಯವೆನಿಸುವ ಇತರ ಸಂಸ್ಥೆಗಳು~~ ತಿರಸ್ಕರಿಸಿದೆ. |

ಮುಖ್ಯಕಾರ್ಯನಿರ್ವಾಹಕರು

ಆಡಳಿತ ಮಂಡಳಿ ಸದಸ್ಯರು

ಅಧ್ಯಕ್ಷರು,

ಸಹಕಾರಿಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

ಆಡಳಿತ ಮಂಡಳಿ ಸದಸ್ಯರು

ನಿರ್ದೇಶಕರು

ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ವಿನೋಬನಗರ, ಶಿವಮೊಗ್ಗ-577 204